ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 13–10–2017

# ಪತ್ರಿಕಾ ಅಮಂತ್ರಣ

1. ಸಾವಯವ ಹಾಗೂ ಸಿರಿಧಾನ್ಯ ಮೇಳ ಉದ್ಘಾಟನೆ:

ಮೇಳ ಉದ್ಘಾಟನೆ:
ಕೃಷ್ಣ ಬೈರೇಗೌಡ, ಕೃಷಿ ಸಚಿವರು,

ಅಧ್ಯಕ್ಷತೆ:
ಕೆ.ಜೆ. ಜಾರ್ಜ್, ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರು.

ದಿನಾಂಕ: 14–10–2017, ಶನಿವಾರ ಸಮಯ: ಬೆಳಿಗ್ಗೆ 11.30 ಗಂಟೆಗೆ
ಸ್ಥಳ: ಡಾ. ಬಿ.ಆರ್. ಅಂಬೇಡ್ಕರ್ ಆಟದ ಮೈದಾನ, ನಾಗವಾರ ಮೇಲು ಸೇತುವೆ ಹತ್ತಿರ, ನಾಗವಾರ, ಬೆಂಗಳೂರು.

2. ವಿಶ್ವ ಆಹಾರ ದಿನಾಚರಣೆ – 2017 ಮತ್ತು ರಾಷ್ಟ್ರೀಯ ವಿಚಾರ ಸಂಕಿರಣ:

ಉದ್ಘಾಟನೆ:
ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ, ವಿಶ್ರಾಂತ ಮುಖ್ಯ ನ್ಯಾಯಾಧೀಶರು, ಭಾರತದ ಸರ್ವೋಚ್ಚ ನ್ಯಾಯಾಲಯ.

ಮುಖ್ಯ ಅತಿಥಿ:
ಯು.ಟಿ. ಖಾದರ್– ಆಹಾರ್ರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವಿಚಾರಗಳ ಇಲಾಖೆಯ ಸಚಿವರು.

ದಿನಾಂಕ: 16–10–2017, ಸೋಮವಾರ ಸಮಯ: ಬೆಳಿಗ್ಗೆ 10.00 ಗಂಟೆಗೆ
ಸ್ಥಳ: ಅಲ್ಯುಮ್ನಿ ಅಸೋಸಿಯೇಷನ್‌ನ ಸಭಾಂಗಣ, ಪಶು ವೈದ್ಯಕೀಯ ಕಾಲೇಜಿನ ಎಡಗಡೆ, ಹೆಬ್ಬಾಳ, ಬೆಂಗಳೂರು – 560 024.

3. ಪತ್ರಿಕಾಗೋಷ್ಠಿ:

**ಎಂ.ಆರ್. ಸೀತಾರಾಂ– ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು,**

**ದಿನಾಂಕ 16–10–2017, ಸೋಮವಾರ, ಸಮಯ: ಮಧ್ಯಾಹ್ನ 12.15 ಗಂಟೆಗೆ.**

**ಸ್ಥಳ: ಕೊಠಡಿ 337, ಮೂರನೇ ಮಹಡಿ, ವಿಧಾನಸೌಧ, ಬೆಂಗಳೂರು.**

4. ಸೋಶಿಯಲ್ ಮೀಡಿಯಾ ಸೆಂಟರ್ ಉದ್ಘಾಟನೆ:

ಉದ್ಘಾಟನೆ:
ಕೆ.ಜೆ. ಜಾರ್ಜ್, ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು.

ದಿನಾಂಕ 16–10–2017, ಸೋಮವಾರ, ಸಮಯ: ಮಧ್ಯಾಹ್ನ 12.30 ಗಂಟೆಗೆ.
ಸ್ಥಳ: ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಸಭಾಂಗಣ, ಎರಡನೇ ಮಹಡಿ, ಅಲಿ ಆಸ್ಕರ್ ರಸ್ತೆ, ಬೆಂಗಳೂರು.

***ಪತ್ರಿಕಾ ಪ್ರಕಟಣೆ***

ಸಂಖ್ಯೆ 186/306

***ಕಟ್ಟಕಡೆಯ ವ್ಯಕ್ತಿಗೂ ತಲುಪಿಸುವ ನಿಟ್ಟಿನಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಪ್ರಮುಖ ಹೆಜ್ಜೆಯನ್ನಿಟ್ಟಿದೆ – ಅಧ್ಯಕ್ಷ ಪ್ರೊ. ಎಸ್.ಜಿ. ಸಿದ್ಧರಾಮಯ್ಯ***

**ಬೆಂಗಳೂರು, ಅಕ್ಟೋಬರ್ 13 ( ಕರ್ನಾಟಕ ವಾರ್ತೆ) :**

ತಂತ್ರಜ್ಞಾನದಲ್ಲಿ ಕನ್ನಡ ಭಾಷಾ ಅನುಷ್ಠಾನಕ್ಕಾಗಿ ರಾಜ್ಯದ ಎಲ್ಲಾ ಜಾಲತಾಣಗಳಲ್ಲಿ ಏಕರೂಪತೆ ಮತ್ತು ಶಿಷ್ಟತೆಯನ್ನು ತರುವ ಕಾರ್ಯ ತುರ್ತಾಗಿ ಆಗಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಜಿ.ಸಿದ್ಧರಾಮಯ್ಯ ಅವರು ತಿಳಿಸಿದ್ದಾರೆ.

ಇಂದು ನಡೆದ ಸಭೆಯಲ್ಲಿ ಅವರು ಮಾತನಾಡಿ ಪ್ರತಿನಿತ್ಯ ಅಪ್ಡೇಟ್ ಅಂದರೆ ಕಾಲೋಚಿತಗೊಳ್ಳುತ್ತಿರುವ ತಂತ್ರಾಂಶಗಳನ್ನು ಕನ್ನಡಕ್ಕೆ ಒಗ್ಗಿಸಿಕೊಳ್ಳುವ ಜೊತೆಗೆ ಬಳಕೆದಾರರಿಗೆ ಹೆಚ್ಚು ಅನುಕೂಲವಾಗುವಂತೆ ಎಲ್ಲಾ ಜಾಲ ತಾಣಗಳನ್ನು ಕನ್ನಡದಲ್ಲಿ ರೂಪಿಸಿ ಸರ್ಕಾರದ ಯೋಜನೆಗಳನ್ನು ಈ ನಾಡಿನ ರೈತರು, ಕಾರ್ಮಿಕರನ್ನೊಳಗೊಂಡಂತೆ ಕಟ್ಟಕಡೆಯ ವ್ಯಕ್ತಿಗೂ ತಲುಪಿಸುವ ನಿಟ್ಟಿನಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಪ್ರಮುಖ ಹೆಜ್ಜೆಯನ್ನಿಟ್ಟಿದೆ ಎಂದು ತಿಳಿಸಿದರು.

ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಏಕರೂಪದ ಜಾಲತಾಣಗಳನ್ನು ಬಳಕೆಗೆ ತರುವುದರಿಂದ ಜಾಲ ತಾಣಗಳಲ್ಲಿ ಏಕಶಿಷ್ಟತೆಯನ್ನು ನಿರ್ವಹಣೆ ಮಾಡುವುದರಿಂದ ತಪ್ಪುಗಳಿಗೆ ಆಸ್ಪದವಿಲ್ಲದಂತೆ ಮತ್ತು ಮಾಹಿತಿಯನ್ನು ಸಮಗ್ರವಾಗಿ ಕನ್ನಡದಲ್ಲಿಯೇ ನೀಡುವುದು ಸಾಧ್ಯವಾಗುತ್ತದೆ ಎಂದರು.

ರಾಜ್ಯಾದ್ಯಂತ ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಿ ಅಲ್ಲಿನ ಇಲಾಖೆಗಳ ಜಾಲತಾಣಗಳನ್ನು ಪರಿಶೀಲಿಸಿದಾಗ ಹೆಚ್ಚು ಜಾಲತಾಣಗಳು ಕನ್ನಡದಲ್ಲಿಲ್ಲದಿರುವುದು ಮತ್ತು ಮಾಹಿತಿಯನ್ನು ಆಂಗ್ಲ ಭಾಷೆಯಲ್ಲಿಯೇ ನೀಡಿರುವುದು ಕಂಡು ಬಂದಿದ್ದರ ಪರಿಣಾಮವಾಗಿ ಪಾಧಿಕಾರ ರಾಜ್ಯದ ಎಲ್ಲಾ ಅಂತರಜಾಲ ತಾಣಗಳಲ್ಲಿ ಏಕರೂಪತೆಯನ್ನು ತರುವ ಬಗ್ಗೆ ಶಿಫಾರಸುಗಳನ್ನೊಳಗೊಂಡ ವರದಿ

ನೀಡುವಂತೆ ಬೇಳೂರು ಸುದರ್ಶನ ಅವರಿಗೆ ವಹಿಸಿದ್ದರ ಸಲುವಾಗಿ ಅವರು ಕಾಲಮಿತಿಯೊಳಗೆ ವರದಿಯನ್ನು ಪ್ರಾಧಿಕಾರಕ್ಕೆ ನೀಡಿರುತ್ತಾರೆ.

ಇಂದಿನ ಸಭೆಯಲ್ಲಿ ಈ ಬಗ್ಗೆ ಎಲ್ಲಾ ಸಾಧ್ಯಾಸಾಧ್ಯತೆಗಳನ್ನು ಚರ್ಚಿಸಿ ದೇಶೀಯ ಮತ್ತು ಅಂತರರಾಷ್ಟ್ರೀಯ ಮಾರ್ಗಸೂಚಿಗಳನ್ವಯ ಕನ್ನಡ ಜಾಲತಾಣಗಳನ್ನು ಒಂದು ಮಾದರಿಯ ರೀತಿಯಲ್ಲಿ ರೂಪಿಸಿ ಬಳಕೆಗೆ ಅನುವಾಗುವ ನಿಟ್ಟಿನಲ್ಲಿ ಶೀಘ್ರದಲ್ಲಿಯೇ ಪರಿಷ್ಕೃತ ವರದಿಯನ್ನು ಮುಖ್ಯಮಂತ್ರಿಗಳಿಗೆ ಸಲ್ಲಿಸಿ ರಾಜ್ಯದ ಜಾಲತಾಣಗಳಲ್ಲಿ ಏಕರೂಪತೆಯನ್ನು ತರುವಂತೆ ಕೋರಲಾಗುವುದರ ಮೂಲಕ ಸಮಗ್ರ ಕನ್ನಡ ಅನುಷ್ಠಾನಕ್ಕೆ ಒತ್ತಾಯಿಸುವುದಾಗಿ ಅವರು ತಿಳಿಸಿದರು.

ಸಭೆಯಲ್ಲಿ ಡಾ. ಕೆ. ಮುರಳೀಧರ, ಕಾರ್ಯದರ್ಶಿಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕೆ. ನಾಗರಾಜ್, ಮುಖ್ಯ ಕಾರ್ಯನಿರ್ವಾಹಣಾಧಿಕರ, ಇ–ಆಡಳಿತ, ಬೆಂಗಳೂರು. ಸುರೇಶ್ ತಾಂತ್ರಿಕ ನಿರ್ದೇಶಕರು, ನ್ಯಾಷನಲ್ ಇನ್ಫರ್ಮೇಟಿಕ್ ಸೆಂಟರ್. ಬೇಳೂರು ಸುದರ್ಶನ, ಜಿ.ಎನ್. ನರಸಿಂಹಮೂರ್ತಿ, ಕಾರ್ಯದರ್ಶಿಗಳು, ಕನ್ನಡ ಗಣಕ ಪರಿಷತ್ತು. ಓಂ ಶಿವಪ್ರಕಾಶ್, ಅಭಿಯಂತರರು, ಬಸವರಾಜ ಪಾಟೀಲ್, ಗಣಕ ಅಭಿಯಂತರರು. ಅರುಣ್ ಜಾವಗಲ್, ಕನ್ನಡ ಗ್ರಾಹಕರ ವೇದಿಕೆ ಇವರುಗಳು ಸಭೆಯಲ್ಲಿ ಭಾಗವಹಿಸಿದ್ದರು.

ಸಂಖ್ಯೆ187/307

## ಕಬ್ಬನ್ ಉದ್ಯಾನವನದಲ್ಲಿ ಈ ಭಾನುವಾರ

**ಬೆಂಗಳೂರು, ಅಕ್ಟೋಬರ್ 13 ( ಕರ್ನಾಟಕ ವಾರ್ತೆ) :**

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ತೆ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ.

ದಿನಾಂಕ: 15–10–2017ರ ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1) ಬೆಳಿಗ್ಗೆ 06.00 ಗಂಟೆಯಿಂದ ಬೆಳಿಗ್ಗೆ 07.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "ಉದ್ಯಾನವನದಲ್ಲಿ ಉದಯರಾಗ" ಎಂಬ ಶೀರ್ಷಿಕೆಯಡಿ ಶ್ರೀ.M.S. ಪ್ರದೀಪ್ ಕುಮಾರ್ ಮತ್ತು ತಂಡ, ದಾವಣಗೆರೆ ರವರಿಂದ ಸುಗಮ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
2) ಸಂಜೆ 05.00 ಗಂಟೆಯಿಂದ ಸಂಜೆ 06.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "ಉದ್ಯಾನವನದಲ್ಲಿ ಸಂಧ್ಯಾರಾಗ" ಎಂಬ ಶೀರ್ಷಿಕೆಯಡಿ ಶ್ರೀ. ಬಿ .ಸಿದ್ದರಾಜಯ್ಯ ಮತ್ತು ತಂಡ, ಚನ್ನಪಟ್ಟಣ ರವರಿಂದ ಸುಗಮ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
3) ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
4) ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

ಈ ಭಾನುವಾರದ ವಿಶೇಷ ಕಾರ್ಯಕ್ರಮಗಳು:

I.ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ

- ಬೆಳಿಗ್ಗೆ 7.00 ಗಂಟೆಯಿಂದ 8.00 ಗಂಟೆಯವರೆಗೆ **ಯೂನಿವರ್ಸ್ ಆರ್ಟ್ ಫೌಂಡೇಶನ್** ಸಂಸ್ಥೆಯ ಸಹಯೋಗದೊಂದಿಗೆ **ಸುರಜಿತ್ ಸೋಮ್** ರವರಿಂದ **ಓಡಿಸ್ಸಿ ನೃತ್ಯ** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
- ಬೆಳಿಗ್ಗೆ 8.00 ಗಂಟೆಯಿಂದ 9.00 ಗಂಟೆಯವರೆಗೆ **ಶ್ರೀವಾಣಿ ವಿದ್ಯಾ ಕೇಂದ್ರ** , ಬಸವೇಶ್ವರ ನಗರ , ಬೆಂಗಳೂರು ಶಾಲಾ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

- **II.ಸ್ಥಳ: ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಹತ್ತಿರ.**

ಸಂಖ್ಯೆ 188/308

## ಅಧಿಕಾರ ಸ್ವೀಕಾರ

**ಬೆಂಗಳೂರು, ಅಕ್ಟೋಬರ್ 13 ( ಕರ್ನಾಟಕ ವಾರ್ತೆ) :**

**ಬೆಂಗಳೂರು ಆಕಾಶವಾಣಿ ಸುದ್ದಿ ವಿಭಾಗದ ಮುಖ್ಯಸ್ಥರಾಗಿ ಭಾರತೀಯ ಸಮಾಚಾರ ಸೇವೆಯ ಹಿರಿಯ ಅಧಿಕಾರಿ ಬಿ.ಬಿ. ನಂಜುಂಡಸ್ವಾಮಿ ಅವರು ಅಧಿಕಾರ ಸ್ವೀಕರಿಸಿದ್ದಾರೆ.**

**ಅವರು ಈ ಮುನ್ನ ನವಿಮುಂಬೈನ ಜಾಹೀರಾತು ಮತ್ತು ದೃಶ್ಯ ನಿರ್ದೇಶನಾಲಯದ ಸಹಾಯಕ ನಿರ್ದೇಶಕರಾಗಿ ಹಾಗೂ ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಅಂಗ ಸಂಸ್ಥೆಯಾದ ಆರ್.ಎನ್.ಐ.ನ ಸಹಾಯಕ ಪ್ರೆಸ್ ರಿಜಿಸ್ಟ್ರಾರ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಶ್ರೀಯುತರು ಮೂಲತ: ಮೈಸೂರಿನವರು ಎಂದು ಪ್ರಕಟಣೆ ತಿಳಿಸಿದೆ.**

**(ಛಾಯಾಚಿತ್ರ ಲಗತ್ತಿಸಿದೆ.**

ಎಸ್‌ಎಂ:ಜೆಡಿ:ಜಿಪಿಆರ್.

ಸಂಖ್ಯೆ 189/309

## ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ – ಅಭ್ಯರ್ಥಿಗಳ ಅರ್ಹತಾ ಪಟ್ಟಿ ಪ್ರಕಟ

**ಬೆಂಗಳೂರು, ಅಕ್ಟೋಬರ್ 13 ( ಕರ್ನಾಟಕ ವಾರ್ತೆ) :**

**ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ: 15-03-2017 ರ ಅಧಿಸೂಚನೆ ಮತ್ತು 15-04-2017 ರ ಸೇರ್ಪಡೆ ಅಧಿಸೂಚನೆಯಲ್ಲಿ ಅಧಿಸೂಚಿಸಲಾದ ಗ್ರೂಪ್ 'ಸಿ' ತಾಂತ್ರಿಕೇತರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ದಿನಾಂಕ 10-6-2017 ರಂದು ನಡೆಸಲಾದ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಲ್ಲಿ ಅರ್ಹತೆ ಹೊಂದಿದ ಅಭ್ಯರ್ಥಿಗಳ ನೋಂದಣಿ ಸಂಖ್ಯೆಗಳ ಪಟ್ಟಿಯನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಆಯೋಗದ ಅಂತರ್ಜಾಲ "http://kpsc.kar.nic.in/Result"** ನಲ್ಲಿ ಪ್ರಕಟಿಸಲಾಗಿದೆ.

ಎಸ್‌ಎಂ:ಜೆಡಿ:ಜಿಪಿಆರ್.

ಸಂಖ್ಯೆ 190/310

## ಶಿಲ್ಪಕಲಾ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿದ ಪರಿಶಿಷ್ಟ ಪಂಗಡದ ಪರಿಣಿತರಿಗೆ ಫೆಲೋಷಿಪ್ ನೀಡಲು ಅರ್ಜಿಗಳ ಆಹ್ವಾನ.

**ಬೆಂಗಳೂರು, ಅಕ್ಟೋಬರ್ 13 ( ಕರ್ನಾಟಕ ವಾರ್ತೆ) :**

ಕರ್ನಾಟಕ ಶಿಲ್ಪಕಲಾ ಕ್ಷೇತ್ರದಲ್ಲಿ ದುಡಿಯುತ್ತಿರುವ ವಿದ್ವಾಂಸರಿಗೆ ಒತ್ತಾಸೆ ನೀಡುವ ದೃಷ್ಟಿಯಿಂದ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು 2017-2018ನೇ ಸಾಲಿನ ಒಂದು ಲಕ್ಷ ರೂಪಾಯಿಗಳ ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಪಂಗಡದ ಅಭ್ಯಥಿಗಳಿಗೆ ಶಿಲ್ಪಕಲಾ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿದ ಪರಿಣಿತರಿಗೆ ಫೆಲೋಷಿಪ್ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಫೆಲೋಷಿಪ್‌ಗಳನ್ನು ಬಯಸುವವರು ಪಾರಂಪರಿಕ ಶಾಸ್ತ್ರೀಯ/ ಸಮಕಾಲೀನ, ಜಾನಪದ, ಬುಡಕಟ್ಟು, ನಶಿಸುತ್ತಿರುವ ದೇಶಿಯ ಶಿಲ್ಪಕಲೆಗೆ ಸಂಬಂಧಿಸಿರುವ ವಿಷಯಗಳ ಬಗ್ಗೆ ಮಾತ್ರವೇ

ಹೆಚ್ಚಿನ ಸಂಶೋಧನೆಯನ್ನು ಕೈಗೊಂಡು ಈ ಸಂಬಂಧದಲ್ಲಿ ತಮ್ಮ ಸಂಪ್ರಬಂಧವನ್ನು ಕನ್ನಡದಲ್ಲಿ ಬರೆಯಬೇಕು.

ಪಿ.ಎಚ್‌ಡಿ ಮತ್ತು ಡಿ.ಲಿಟ್ ಪದವಿಗಳಿಗಾಗಿ ಸಿದ್ಧಪಡಿಸಿರುವ ಅಥವಾ ಸಲ್ಲಿಸಬಹುದಾದ ಮಹಾಪ್ರಬಂಧಗಳನ್ನು ಫೆಲೋಷಿಪ್‌ಗಾಗಿ ಪರಿಗಣಿಸುವುದಿಲ್ಲ. ಸಂಶೋಧನಾ ಪ್ರಬಂಧಗಳು ಪಾರಂಪರಿಕ ಶಾಸ್ತ್ರೀಯ/ಸಮಕಾಲೀನ, ಜಾನಪದ ಬುಡಕಟ್ಟು ಶಿಲ್ಪಗಳಿಗೆ ಅನ್ವಯವಾಗುವ ಶಾಸ್ತ್ರ, ನಿರ್ಮಾಣ, ಕ್ರಮ. ಪದ್ಧತಿ, ಆಚಾರ ಇತ್ಯಾದಿಗಳ ಹಿನ್ನೆಲೆಯಾಗಿರುವ ಸೂತ್ರಗಳ ಸಂಕೇತ, ತತ್ವ, ದರ್ಶನ ಇತ್ಯಾದಿಗಳ ಅಮೂಲಾಗ್ರವಾದ ಅಧ್ಯಯನವಾಗಿರಬೇಕೆಂಬುದು ನಿಯೋಜಕರ ಆಶಯ. ಇದನ್ನು ಪ್ರಬಂಧಕಾರರು ಗಮಿನಿಸಬೇಕು.

ಪ್ರಬಂಧದೊಂದಿಗೆ ಅವಶ್ಯಕವಾಗುವ ರೇಖಾಚಿತ್ರ, ಛಾಯಾಚಿತ್ರ ಮುಂತಾದವುಗಳನ್ನು ಲೇಖಕರೇ ಒದಗಿಸಬೇಕು. ಸಂಬಂಧಪಟ್ಟ ಆಕರ ಗ್ರಂಥಗಳ ಸಂಪೂರ್ಣ ವಿವರಗಳೊಂದಿಗೆ ಪಟ್ಟಿ ಇರಬೇಕು.

ಪ್ರಬಂಧದ ವ್ಯಾಪ್ತಿಯು ಎ–4ರ ಆಕಾರದ ಹಾಳೆಯಲ್ಲಿ ಕನಿಷ್ಠ 150ಪುಟಗಳಾದರೂ ಇರಬೇಕು. ಫೆಲೋಷಿಪ್ ಪಡೆದುಕೊಂಡು ಸಿದ್ಧಪಡಿಸಿದ ಪ್ರಬಂಧಗಳನ್ನು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ಮೊದಲ ಮುದ್ರಣವಾಗಿ ಪ್ರಕಟಿಸುವ ಹಕ್ಕನ್ನು ಪಡೆದಿರುತ್ತದೆ.

ಸೂಕ್ತವಾದ ಪ್ರವೇಶಗಳು ಬಾರದೆ ಇದ್ದಲ್ಲಿ ಫೆಲೋಷಿಪ್‌ಗಳನ್ನು ತಡೆ ಹಿಡಿಯುವ ಹಕ್ಕು ಕರ್ನಾಟಕ ಶಿಲ್ಪಕಲಾ ಅಕಾಡೆಮಿಗೆ ಇರುತ್ತದೆ. ಅಭ್ಯರ್ಥಿಗಳನ್ನು ನೇರ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು.

ಸದರಿ ಫೆಲೋಷಿಪ್‌ಗೆ ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಪಂಗಡದ ಅಭ್ಯಥಿಗಳು ನಿಗಧಿತ ಅರ್ಜಿ ನಮೂನೆಯನ್ನು ಕಚೇರಿಯ ವೇಳೆಯಲ್ಲಿ ಪಡೆದು ಅರ್ಜಿಯನ್ನು ಸಲ್ಲಿಸಬೇಕು.

ಸಂಪ್ರಬಂಧಕಾರರು ಫೆಲೋಷಿಪ್‌ಗಾಗಿ ತಮ್ಮ ಸ್ವ ಪರಿಚಯವನ್ನು, ಕ್ಷೇತ್ರದಲ್ಲಿ ತಮಗಿರುವ ಅನುಭವವನ್ನು ದಾಖಲಿಸುತ್ತಾ, ಸಂಪ್ರಬಂಧದ ವಿಷಯದ ವಿವರ ಮತ್ತು ವ್ಯಾಪ್ತಿಯ ಬಗ್ಗೆ ಐದರಿಂದ–ಆರು ಪುಟಗಳಲ್ಲಿ ಪರಿಚಯವನ್ನು ಸಂಗ್ರಹಿಸಿ ಅರ್ಜಿಯನ್ನು ರಿಜಿಸ್ಟ್ರಾರ್, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–560002. ಅಥವಾ ಅಥವಾ ಅಕಾಡೆಮಿ ಅಂತರ್ಜಾಲ: www.karnatakashilpakalaacademy.org ಇಲ್ಲಿ ಸಹ ಪಡೆಯಬಹುದಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಕನಾಟಕ ಶಿಲ್ಪಕಲಾ ಅಕಾಡೆಮಿಗೆ ದಿ:13–11–2017ರ ಒಳಗಾಗಿ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.